| Roll No. | | | | | | | | | | | | Serial No. of Q. C. A. B. |
|---|---|---|---|---|---|---|---|---|---|---|---|---|

ಒಟ್ಟು ಪ್ರಶ್ನೆಗಳ ಸಂಖ್ಯೆ : 54 ] [ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 24

Total No. of Questions : 54 ] [ Total No. of Printed Pages : 24

**ಸಂಕೇತ ಸಂಖ್ಯೆ : 62-K** **ವಿಷಯ : ತೃತೀಯ ಭಾಷೆ — ಕನ್ನಡ**

**Code No. : 62-K** **Subject : Third Language — KANNADA**

ದಿನಾಂಕ : 09. 04. 2013 ] [ Date : 09. 04. 2013

ಸಮಯ : ಬೆಳಿಗ್ಗೆ 9-30 ರಿಂದ ಮಧ್ಯಾಹ್ನ 12-15 ರವರೆಗೆ ] [ Time : 9-30 A.M. to 12-15 P.M.

ಪರಮಾವಧಿ ಅಂಕಗಳು : 100 ] [ Max. Marks : 100

**FOR OFFICE USE ONLY**

| Q. No. | Marks | | Q. No. | Marks | | Q. No. | Marks | | Q. No. | Marks | | Q. No. | Marks |
|---|---|---|---|---|---|---|---|---|---|---|---|---|---|
| 1. | | | 12. | | | 23. | | | 34. | | | 45. | |
| 2. | | | 13. | | | 24. | | | 35. | | | 46. | |
| 3. | | | 14. | | | 25. | | | 36. | | | 47. | |
| 4. | | | 15. | | | 26. | | | 37. | | | 48. | |
| 5. | | | 16. | | | 27. | | | 38. | | | 49. | |
| 6. | | | 17. | | | 28. | | | 39. | | | 50. | |
| 7. | | | 18. | | | 29. | | | 40. | | | 51. | |
| 8. | | | 19. | | | 30. | | | 41. | | | 52. | |
| 9. | | | 20. | | | 31. | | | 42. | | | 53. | |
| 10. | | | 21. | | | 32. | | | 43. | | | 54. | |
| 11. | | | 22. | | | 33. | | | 44. | | | × | |
| ***Total Marks*** | | | | | | | | | | | | | |

| **Total Marks in words** | | **Grand Total** | |
|---|---|---|---|

| | | | |
|---|---|---|---|
| 1. ✓ | | | |
| 2. ✓ | | ✓ | ✓ |
| *Signature of Evaluators* | *Registration No.* | *Signature of the Deputy Chief* | *Signature of the Room Invigilator* |

*ಸಾಮಾನ್ಯ ಸೂಚನೆಗಳು :*

i) ಈ ಪ್ರಶ್ನೋತ್ತರ ಕಿರು ಪುಸ್ತಕವು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಒಟ್ಟು 54 ಪ್ರಶ್ನೆಗಳನ್ನು ಹೊಂದಿದೆ.

ii) ಪ್ರತಿಯೊಂದು ವಸ್ತುನಿಷ್ಠ ಮಾದರಿ ಪ್ರಶ್ನೆಗೆ ಉತ್ತರಕ್ಕಾಗಿ ಜಾಗವನ್ನು ಕೊಡಲಾಗಿದೆ. ಸರಿಯಾದ ಉತ್ತರವನ್ನು ಆರಿಸಿ ಕೊಟ್ಟಿರುವ ಜಾಗದಲ್ಲಿ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.

iii) ವಿಷಯನಿಷ್ಠ ಮಾದರಿ ಪ್ರಶ್ನೆಯ ಉತ್ತರಗಳಿಗೆ ಸಾಕಷ್ಟು ಜಾಗವನ್ನು ಕೊಡಲಾಗಿದೆ. ಉತ್ತರಗಳನ್ನು ಆಯಾ ಜಾಗಗಳಲ್ಲಿಯೇ ಬರೆಯಿರಿ.

iv) ವಸ್ತುನಿಷ್ಠ ಮಾದರಿ ಮತ್ತು ವಿಷಯನಿಷ್ಠ ಮಾದರಿ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಅನುಸರಿಸಿ.

v) ವಿದ್ಯಾರ್ಥಿಗಳು ಪೆನ್ಸಿಲ್‌ನಿಂದ (ಸೀಸದ ಕಡ್ಡಿ) ಉತ್ತರಗಳನ್ನು ಬರೆಯಬಾರದು. ಪೆನ್ಸಿಲ್‌ನಿಂದ ಉತ್ತರ ಬರೆದಲ್ಲಿ ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದಿಲ್ಲ. (ನಕ್ಷೆಗಳು, ರೇಖಾಚಿತ್ರಗಳು ಮತ್ತು ಭೂಪಟಗಳನ್ನು ಬಿಟ್ಟು).

vi) ಬಹು–ಆಯ್ಕೆ, ಖಾಲಿ ಸ್ಥಳಗಳನ್ನು ಭರ್ತಿ ಮಾಡುವುದು, ಹೊಂದಿಸಿ ಬರೆಯುವ ಪ್ರಶ್ನೆಗಳ ವಿಷಯದಲ್ಲಿ ಕೆರೆದು ಅಳಿಸುವುದು / ತಿದ್ದಿ ಬರೆಯುವುದು / ಗುರುತಿಸುವುದು ಮಾಡಿದಲ್ಲಿ ಮೌಲ್ಯಮಾಪನಕ್ಕೆ ಅನರ್ಹವಾಗುತ್ತದೆ.

vii) ಪ್ರಶ್ನೆ ಪತ್ರಿಕೆಯನ್ನು ಓದಿ, ಅರ್ಥೈಸಿಕೊಳ್ಳಲು 15 ನಿಮಿಷಗಳ ಹೆಚ್ಚಿನ ಕಾಲಾವಕಾಶ ನೀಡಲಾಗಿದೆ.

ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರಕ್ಕೆ ಕೊಟ್ಟಿರುವ ಜಾಗದಲ್ಲಿಯೇ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ : $15 \times 1 = 15$

1. ಮೂಗಿನ ಸಹಾಯದಿಂದ ಉಚ್ಚರಿಸುವ ಅಕ್ಷರಗಳನ್ನು ಹೀಗೆನ್ನುತ್ತಾರೆ

(ಎ) ದೀರ್ಘ (ಬಿ) ಗುಣಿತ

(ಸಿ) ಅಲ್ಪಪ್ರಾಣ (ಡಿ) ಅನುನಾಸಿಕ

*ಉತ್ತರ :* ______________________

2. 'ನಗುವಿನ ಪರದೆಯ ಒಳಗೊಳಗೆಲ್ಲ' — ಈ ಸಾಲಿನಲ್ಲಿರುವ ಅಲಂಕಾರ

(ಎ) ರೂಪಕ (ಬಿ) ಶ್ಲೇಷ

(ಸಿ) ಉಪಮಾ (ಡಿ) ಅನನ್ವಯ

*ಉತ್ತರ :* ______________________________

3. 'ಪ್ರಜ್ಞಾವಂತೆ' ಪದದ ಅನ್ಯಲಿಂಗ ರೂಪ

(ಎ) ಪ್ರಜಾವಂತ (ಬಿ) ಪ್ರಜ್ಞಾವಂತ

(ಸಿ) ಪ್ರಜಾವಂತಾ (ಡಿ) ಪ್ರಜ್ಞಾವಂತರು

*ಉತ್ತರ :* ______________________________

4. ಇವುಗಳಲ್ಲಿ ಅನ್ಯದೇಶ್ಯಪದ

(ಎ) ನೀರು (ಬಿ) ಟೂರು

(ಸಿ) ಜಾರು (ಡಿ) ಹಾರು

*ಉತ್ತರ :* ______________________________

5. ''ಕಪ್ಪೆಗಳ ವಟವಟ ಶಬ್ದಕೇಳಿ ಬೇಜಾರಾಯಿತು'' — ಈ ವಾಕ್ಯದಲ್ಲಿರುವ ಅನುಕರಣಾವ್ಯಯ

(ಎ) ಕಪ್ಪೆಗಳ (ಬಿ) ಕೇಳಿಕೇಳಿ

(ಸಿ) ಶಬ್ದಕೇಳಿ (ಡಿ) ವಟವಟ

*ಉತ್ತರ :* ______________________________

6. 'ಬಣ್ಣ' — ಈ ಪದದ ತತ್ಸಮ ಪದ

(ಎ) ವರುಣ (ಬಿ) ವರ್ಣ

(ಸಿ) ಸ್ವರ್ಣ (ಡಿ) ಬರುಣ

*ಉತ್ತರ :* ______________________________

7. 'ಅನುಯಾಯಿ' — ಈ ಪದದ ಅರ್ಥ

(ಎ) ಅನ್ಯಾಯ | (ಬಿ) ವಿಧೇಯನಾಯಕ

(ಸಿ) ಹಿಂಬಾಲಕ | (ಡಿ) ನ್ಯಾಯಾಧೀಶ

ಉತ್ತರ : ____________________

8. 'ಪಶ್ಚಿಮ' — ಈ ದಿಕ್ಕಿನ ಕನ್ನಡ ಹೆಸರು

(ಎ) ಮೂಡಣ | (ಬಿ) ತೆಂಕಣ

(ಸಿ) ಬಡಗಣ | (ಡಿ) ಪಡುವಣ

ಉತ್ತರ : ____________________

9. 'ಮುಂಗಾರು' — ಈ ಪದದ ವಿರುದ್ಧಾರ್ಥಕ ಪದ

(ಎ) ಹಿಂಗಾರು | (ಬಿ) ಇಂಗಾರ

(ಸಿ) ಕಾರುಮುಂದು | (ಡಿ) ಅಮುಂಗಾರ

ಉತ್ತರ : ____________________

10. 'ನೀವೊಬ್ರೆ' — ಈ ಪದದ ಗ್ರಾಂಥಿಕ ರೂಪ

(ಎ) ನೀವು ಬರೆ | (ಬಿ) ನೀವಿಬ್ಬರೆ

(ಸಿ) ನೀವು ಒಬ್ಬರೆ | (ಡಿ) ನಾವೊಬ್ಬರೆ

ಉತ್ತರ : ____________________

11. 'ನಿತ್ಯೋತ್ಸವ' — ಈ ಪದ ಬಿಡಿಸಿ ಬರೆದಾಗ

(ಎ) ನಿತ್ಯೋ + ಉತ್ಸವ | (ಬಿ) ನಿತ್ಯಾ+ ಉತ್ಸವ

(ಸಿ) ನಿತ್ಯ+ ಉತ್ಸವ | (ಡಿ) ನಿತ್ಯ+ ಉಸ್ತವ

ಉತ್ತರ : ____________________

12. 'ಕೊರಗಿ ಕೊರಗಿ' ಇಲ್ಲಿರುವ ವ್ಯಾಕರಣಾಂಶ

(ಎ) ಅನುಕರಣಾವ್ಯಯ (ಬಿ) ನುಡಿಗಟ್ಟು

(ಸಿ) ದ್ವಿರುಕ್ತಿ (ಡಿ) ಜೋಡಿಪದ

*ಉತ್ತರ :* ____________________

13. ಇವುಗಳಲ್ಲಿ ಶುದ್ಧರೂಪ

(ಎ) ಮುತ್ತೈದೆ (ಬಿ) ಮೂತ್ತೈದೆ

(ಸಿ) ಮುತ್ತುತ್ತೈದೆ (ಡಿ) ಮತ್ತೈದೆ

*ಉತ್ತರ :* ____________________

14. 'ನೋಡು' ದಾತುವಿನ ನಿಷೇಧ ರೂಪ

(ಎ) ನೋಡುವನು (ಬಿ) ನೋಡನು

(ಸಿ) ನೋಡಿದನು (ಡಿ) ನೋಡತ್ತಾನೆ

*ಉತ್ತರ :* ____________________

15. 'ಮೊಮ್ಮಗ' — ಈ ಪದದ ಸ್ತ್ರೀಲಿಂಗ ರೂಪ

(ಎ) ಮಗಳು (ಬಿ) ಮೊಮ್ಮಗರು

(ಸಿ) ಮೊಮ್ಮಗು (ಡಿ) ಮೊಮ್ಮಗಳು

*ಉತ್ತರ :* ____________________

16. ಈ ಕೆಳಗಿನ 'ಅ' ಪಟ್ಟಿಯ ಅಂಶಗಳಿಗೆ ಸರಿಹೊಂದುವ ಪದಗಳನ್ನು'ಬ' ಪಟ್ಟಿಯಿಂದ ಕ್ರಮಾಕ್ಷರದೊಂದಿಗೆ ಆರಿಸಿ, ಉತ್ತರಕ್ಕೆ ಮೀಸಲಿಟ್ಟ ಜಾಗದಲ್ಲಿ ಬರೆಯಿರಿ : 5 × 1 = 5

| ಅ | | ಬ | |
|---|---|---|---|
| i) | ನೀರುಬೀಳು | ಅ) | ಸರ್ವನಾಮ |
| ii) | ಅವನು | ಆ) | ಮದುವೆ |
| iii) | ಮಹಿಳೆಯರು | ಇ) | ತದ್ಭವ ಪದ |
| iv) | ಪಾಣಿ ಗ್ರಹಣ | ಈ) | ಗುಣಸಂಧಿ |
| v) | ಚಕ್ರೇಶ್ವರ | ಉ) | ಜಲಪಾತ |
| | | ಊ) | ಬಹುವಚನ |
| | | ಋ) | ಅನ್ವರ್ಥನಾಮ |
| | | ಎ) | ಆಗಮ ಸಂಧಿ |

*ಉತ್ತರಗಳು :* i) ____________________

ii) ____________________

iii) ____________________

iv) ____________________

v) ____________________

ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗಗಳನ್ನು ಸೂಕ್ತ ಪದಗಳಿಂದ ತುಂಬಿ ಬರೆಯಿರಿ : 5 × 1 = 5

17. ಮನುಷ್ಯ ತಾನು ನೋಡಿದ ಸ್ಥಳಗಳ ಪರಿಚಯ, ಪಡೆದ ಅನುಭವಗಳನ್ನು ದಾಖಲು ಮಾಡುವುದೇ ..........................

18. ಗಿಡವಾಗಿ ಬಗ್ಗದ್ದು ...................................................................................... ಬಗ್ಗೀತೇ ?

19. ಕಾಲದ ಅನಂತತೆಯನ್ನು ಪ್ರಾತಿನಿಧಿಕವಾಗಿ ಸೂಚಿಸುವ ಪ್ರಕೃತಿ ಆಧಾರಿತ ಹಬ್ಬ ..........................................

20. ರತ್ನಾಕರವರ್ಣಿಯು ................................................................. ಕವಿ ಎಂದು ಹೆಸರು ಗಳಿಸಿದ್ದಾನೆ.

21. ಬೆಳೆಯುವ .................................................................................. ಮೊಳಕೆಯಲ್ಲಿ.

ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯಗಳಲ್ಲಿ ಉತ್ತರ ಬರೆಯಿರಿ : $8 \times 1 = 8$

22. ಮಲಗುವಾಗ ಭಾರತೀಯರು ಭೂಮಿಯನ್ನು ಏನೆಂದು ಪ್ರಾರ್ಥಿಸುತ್ತಾರೆ ?

23. ಪಂಪ ಸಾಹಿತ್ಯದ ಎರಡು ಶಿಖರಗಳಾವುವು ?

24. ಗೋಮುಖದಿಂದ ಹರಿದು ಬರುವ ಬಿಸಿ ನೀರು ಎಲ್ಲಿಗೆ ಬೀಳುತ್ತದೆ ?

25. ಮಾನವನ ಕೌಶಲ್ಯಕ್ಕೆ ಕಳಸವಿಟ್ಟಂತಿರುವುದು ಯಾವುದು ?

26. ತಗಡೂರು ರಾಮಚಂದ್ರರಾಯರು ಕೈಗಾಡಿಯಲ್ಲಿ ಏನನ್ನು ಮಾರುತ್ತಿದ್ದರು ?

27. ಹಿರಿಯರು ಕವಿಗಳನ್ನು ಎಲ್ಲಿಗೆ ಆಹ್ವಾನಿಸಿದರು ?

28. 'ನಗರಗಳ ರಾಣಿ' ಎಂದು ಹೆಸರಾಗಿರುವ ನಗರ ಯಾವುದು ?

29. ಯಾವ ಜನ್ಮದೊಡ್ಡದು ಎಂದು ದಾಸರು ಹೇಳಿದ್ದಾರೆ ?

ಈ ಕೆಳಗಿನ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರ ಬರೆಯಿರಿ : $15 \times 2 = 30$

30. ರಾಮಕೃಷ್ಣನು ತನ್ನ ಹೆಂಡತಿಯ ಕಿವಿಯಲ್ಲಿ ಹೇಳಿದ ಉಪಾಯ ಯಾವುದು ?

31. ಯಾವ ದಾರಿಯಲ್ಲಿ ಹೋಗುವಂತೆ ಬಾಲೆ ಬಳೆಗಾರನಿಗೆ ಹೇಳಿದಳು ?

32. ರಾಣಿ ಖಚಿತವಾಗಿ ರಾಮಕೃಷ್ಣನೇ ಸತ್ತಿರುವನೆಂದು ಹೇಳಲು ಕಾರಣವೇನು ?

33. ಬಾಲೆಯು ಹಡೆದವ್ವನ ಗುರುತನ್ನು ಬಳೆಗಾರನಿಗೆ ಹೇಗೆ ಹೇಳಿದಳು ?

34. ಬಿ.ವಿ. ಕಾರಂತರ ವಿದ್ಯಾಭ್ಯಾಸವನ್ನು ತಿಳಿಸಿ.

35. ಎಂಥ ಯುಗಾದಿ ಬರಲೆಂದು ಕವಿ ಆಶಿಸಿದ್ದಾನೆ ?

36. ಬಾಲ್ಯದಲ್ಲಿ ಕಾರಂತರಿಗೆ ಯಾವ ಯಾವ ಬಗೆಯ ಕಲಾ ಶ್ರೀಮಂತಿಕೆ ಸಿಕ್ಕಿತು ?

37. ತಗಡೂರು ರಾಮಚಂದ್ರರಾಯರನ್ನು 'ಭೋಟಾ ಗಾಂಧಿ' ಎಂದು ಏಕೆ ಕರೆದಿದ್ದಾರೆ ?

38. ಕವಿ ಹಡಗನ್ನು ಸಂಕ್ಷಿಪ್ತ ಬ್ರಹ್ಮಾಂಡ ಎಂದು ಏಕೆ ಕರೆದಿದ್ದಾರೆ ?

39. ಮರಿಗೌಡರ ಕಳಕಳಿ ಮತ್ತು ಹೇರಾಸೆ ಏನಾಗಿತ್ತು ?

40. ಕವಿಪುತ್ರನು ಭಾರತಕ್ಕೆ ಹಿಂದಿರುಗಲು ತೀರ್ಮಾನಿಸಿದ್ದು ಏಕೆ ?

41. ಮಳೆನೀರು ಭೂಮಿಯೊಳಕ್ಕೆ ಇಳಿಯುವುದು ಕಡಿಮೆಯಾಗುತ್ತಿದೆ ಏಕೆ ?

42. ಭರತ ಚಕ್ರೇಶ್ವರನು ಹೇಗೆ ಸುಖವಾಗಿ ಬಾಳುತ್ತಿದ್ದನು ?

43. ಮಳೆಕೊಯ್ಲಿನ ಕ್ರಮಗಳಾವುವು ?

44. ಸಿಂಹಾಸನವೇರಿದ ಭರತ ಚಕ್ರೇಶ್ವರ ಹೇಗೆ ಕಾಣುತ್ತಿದ್ದನು ?

ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭವನ್ನು ಕೃತಿ, ಕರ್ತೃ ಸಹಿತ ವಿವರಿಸಿ : $4 \times 3 = 12$

45. 'ಈ ನೆಲವೇ ನಾನೆಂದು ಭಾವಿಸಿಕೊ.'

46. 'ಎಂತಹಾ ಅದ್ಭುತ ಕಲಾಕಾರನಪ್ಪ, ಈ ಪ್ರಕೃತಿ !'

47. 'ಮೈಸೂರಿನ ಮಲ್ಲಿಗೆ ಹಾರ !'

48. 'ಶಠತೆಯನು ಸತ್ಯದಲಿ ಜಯಿಸಿದ ಕಲಿ.'

49. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ : 1 × 3 = 3

ಕಣ್ಣು ಕೈಕಾಲ್ ________________________________

________________________________

________________________________

________________________________ಇರುವರೆ ಖೋಡಿ.

ಅಥವಾ

ಸುಳಿ ಮಿಂಚಿನ ______________________________

______________________________

______________________________

______________________________ ರತ್ನಾಕರನ ಕೆರೆ ॥

ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ಎರಡು** ಪ್ರಶ್ನೆಗಳಿಗೆ 5-6 ವಾಕ್ಯಗಳಲ್ಲಿ ಉತ್ತರ ಬರೆಯಿರಿ : $2 \times 4 = 8$

— ಲಕ್ಷ್ಮಣೆಗೆ ಜನ್ಮರಹಸ್ಯವೇನು ?

— ಮಗುವಿನ ಕರೆ ತಾಯಿಯಲ್ಲಿ ಹೇಗೆ ಜೀವನ ಪ್ರೀತಿಯನ್ನು ಮೂಡಿಸಿತು ?

— 'ಸ್ವದೇಶಿ ವ್ರತದ ಜಂಗಮ ಮೂರ್ತಿ' ಎಂದು ರಾಮಚಂದ್ರರಾಯರನ್ನು ಲೇಖಕರು ಏಕೆ ಕರೆದಿದ್ದಾರೆ ?

50.

51.

52. ಈ ಕೆಳಗಿನ ಪ್ರಶ್ನೆಗಳಲ್ಲಿ **ಒಂದನ್ನು** ಕುರಿತು 5-6 ವಾಕ್ಯಗಳಲ್ಲಿ ಉತ್ತರ ಬರೆಯಿರಿ : $1 \times 4 = 4$

— ಶಾಂತದೇವಿ ಕೆ. ಸಾಬಾದಿಯವರು ಧ್ಯಾನದ ಮಹತ್ವವನ್ನು ಹೇಗೆ ನಿರೂಪಿಸಿದ್ದಾರೆ.

— ಗಾಂಧಿ ಕವನದ ಸಾರಾಂಶವನ್ನು ವಿವರಿಸಿ.

53. — ನೀವು ಮಂಗಳೂರು ಜಿಲ್ಲೆ, ಬಂಟ್ವಾಳ ತಾಲ್ಲೂಕು, ಕಳವಾರು ಸರ್ಕಾರಿ ಪ್ರೌಢ ಶಾಲೆಯ 10ನೇ ತರಗತಿ ವಿದ್ಯಾರ್ಥಿ ನವೀನ / ವಿದ್ಯಾರ್ಥಿನಿ ನವ್ಯ ಎಂದು ಭಾವಿಸಿ ಮುಂದಿನ ವಿದ್ಯಾಭ್ಯಾಸಕ್ಕಾಗಿ ವರ್ಗಾವಣೆ ಪತ್ರ ನೀಡುವಂತೆ ನಿಮ್ಮ ಮುಖ್ಯೋಪಾಧ್ಯಾಯರಿಗೊಂದು ಅರ್ಜಿ ಬರೆಯಿರಿ. $1 \times 5 = 5$

ಅಥವಾ

— ಮಂಗಳೂರು ಜಿಲ್ಲೆ, ಪುತ್ತೂರು ತಾಲ್ಲೂಕು, ಕುಂತೂರು ಗ್ರಾಮದ ಇಡಾಳ ಎಂಬಲ್ಲಿ ವಾಸವಿರುವ ನಿಮ್ಮ ತಂದೆಗೆ ಪ್ರವಾಸಕ್ಕಾಗಿ 500 ರೂಪಾಯಿ ಕಳುಹಿಸಿಕೊಡುವಂತೆ ಪತ್ರ ಬರೆಯಿರಿ.

54. ಕೆಳಗಿನ ವಿಷಯಗಳಲ್ಲಿ ಯಾವುದಾದರೂ **ಒಂದನ್ನು** ಕುರಿತು 15 ವಾಕ್ಯಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ : 1 × 5 = 5

— ಗ್ರಂಥಾಲಯದ ಮಹತ್ವ

— ಜಲಸಂರಕ್ಷಣೆ

— ಕ್ರೀಡೆಗಳ ಮಹತ್ವ